ಓಂ ಶಾಂತಿ, ಬಾಪ್ ದಾದಾ ಅವ್ಯಕ್ತ ಮುರಳಿ 02-02-1970

*ಅತ್ಮಿಕ ಶಕ್ತಿಯ ಗುರುತು* (आत्मिक पॉवर की परख)

ಇಂದು ಬಾಪ್ ದಾದಾ ಪ್ರತಿಯೊಬ್ಬರ ಪ್ರೊಜೆಕ್ಟರ್ ಷೋ ನೋಡುತ್ತಿದ್ದಾರೆ. ತಾವೂ ಸಹ ಪ್ರೊಜೆಕ್ಟರ್ ಇಟ್ಟುಕೊಳ್ಳುತ್ತೀರಾ? ಚಿತ್ರ ನೋಡುವಂತಹ ಎಂತಹ ಪ್ರೊಜೆಕ್ಟರ್ ಇದೆ? ಪ್ರತಿಯೊಬ್ಬರ ಕಣ್ಣು ಪ್ರೊಜೆಕ್ಟರ್ ಆಗಿದೆ. ಈ ಪ್ರೊಜೆಕ್ಟರ್ ಮುಖಾಂತರ ಯಾವ ಚಿತ್ರವನ್ನು ಜಗತ್ತಿಗೆ ತೋರಿಸುವಿರಿ? ಅದಾಗಿದೆ ವಿಜ್ಞಾನದ ಶಕ್ತಿಯ ಪ್ರೊಜೆಕ್ಟರ್ ಮತ್ತು ಇದಾಗಿದೆ ಈಶ್ವರೀಯ ಶಕ್ತಿಯ ಪ್ರೊಜೆಕ್ಟರ್. ಎಷ್ಟೆಷ್ಟು ಪ್ರೊಜೆಕ್ಟರ್ ಶಕ್ತಿಶಾಲಿಯಾಗಿರುವುದೋ ಅಷ್ಟು ಸ್ಪಷ್ಟವಾದ ದೃಶ್ಯ ನೋಡಲು ಬರುವುದು. ಈ ದಿವ್ಯನೇತ್ರ ಎಷ್ಟೆಷ್ಟು ಸ್ಪಷ್ಟ ಎಂದರೆ ಆತ್ಮೀಯತೆಯಿಂದ ಸಂಪೂರ್ಣವಾಗುವವೋ ಅಷ್ಟು ಮಕ್ಕಳ ಕಣ್ಣುಗಳಿಂದ ಅನೇಕ ಚಿತ್ರಗಳನ್ನು ನೋಡಬಹುದು ಮತ್ತು ಪ್ರೊಜೆಕ್ಟರ್ ಮುಖಾಂತರ ಸ್ಪಷ್ಟವಾಗಿ ಕಂಡು ಬರುವಂತೆ ಸ್ಪಷ್ಟವಾಗಿ ಕಂಡು ಬರುವವು, ಆದ್ದರಿಂದ ಈ ಕಣ್ಣುಗಳಿಂದ ಬಾಪ್ ದಾದಾ ಮತ್ತು ಪೂರ್ಣ ರಚನೆಯ ಸ್ಥೂಲ, ಸೂಕ್ಷ್ಮ, ಮೂಲ ಲೋಕಗಳ ಚಿತ್ರ ಕಂಡು ಬರುವವು. ಯಾರೇ ನಿಮ್ಮೆದುರಿಗೆ ಬಂದರೂ ನಿಮ್ಮ ಕಣ್ಣುಗಳಿಂದ ಸಾಕ್ಷಾತ್ಕಾರ ಮಾಡಬಹುದು. ಎಷ್ಟೆಷ್ಟು ಪ್ರಕಾಶ ಪ್ರಖರವಾಗಿರುವುದೋ ಅಷ್ಟು ಚಿತ್ರ ಸ್ಪಷ್ಟ, ಬಲ್ಬ್ ಎಷ್ಟು ಶಕ್ತಿಶಾಲಿಯಾಗಿದೆ ಎಂದು ಬಾಪ್ ದಾದಾ ಹೇಗೆ ನೋಡುತ್ತಾರೆ ಎಂಬುದು ಗೊತ್ತಿದೆಯೇ? ತಮ್ಮ ಬಲ್ಬ್ ಎಷ್ಟು ಶಕ್ತಿಶಾಲಿ ಎಂದು ನೋಡಿಕೊಂಡಿದ್ದೀರಾ? ಪ್ರತಿಯೊಬ್ಬರೂ ತಮ್ಮ ಬಲ್ಬ್ ಎಷ್ಟು ಶಕ್ತಿಯದು ಎಂದು ನೋಡಿಕೊಂಡಿದ್ದೀರಾ? ಯಾರು ತಮ್ಮ ಬಲ್ಬ್ ಎಷ್ಟು ಶಕ್ತಿಯನ್ನು ಹೊಂದಿದೆ ಮತ್ತು ತಮ್ಮ ಪ್ರತಿಶತದ (%) ಪ್ರಕಾರ ಎಷ್ಟು ಎಂಬುದನ್ನು ತಿಳಿದಿರುವಿರೋ ಅವರು ಕೈಎತ್ತಿ, ಆತ್ಮ ಎಷ್ಟು ಶಕ್ತಿಶಾಲಿಯಾಗಿದೆ ಎಂದು ಯಾವ ಆಧಾರದ ಮೇಲೆ ಗುರುತಿಸುವಿರಿ? (ಚಾರ್ಟ್ ನಿಂದ) ಅದೂ ಸಹ ಒಟ್ಟು ಮಾತಾಯಿತು, ಯಾವ ಮಾತಿನಿಂದ ತಮ್ಮನ್ನು ಗುರುತಿಸುವುದು? ಬೆಳಕಿನಲ್ಲಿ ಯಾವ ವಿಶೇಷತೆಯಿರುತ್ತದೆ? ಯಾವ ವಸ್ತು ಹೇಗಿದೆಯೋ ಹಾಗೆಯೇ ಸ್ಪಷ್ಟವಾಗಿ ಕಂಡು ಬರುವ ವಿಶೇಷತೆಯಿರುತ್ತದೆ. ಕತ್ತಲೆಯಲ್ಲಿ ಯಾವ ವಸ್ತು ಹೇಗಿದೆಯೋ ಹಾಗೆ ಕಂಡು ಬರುವುದಿಲ್ಲ. ಹಾಗಾದರೆ ವಿಶೇಷ ಗುಣವಾಗಿದೆ ಅಸ್ಪಷ್ಟವನ್ನು ಸ್ಪಷ್ಟ ಮಾಡುವುದು. ಇದು ತಮ್ಮ ಪ್ರಕಾಶದ ಪ್ರತಿಶತವನ್ನು ಗುರುತಿಸುವ ವಿಧಿಯಾಗಿದೆ. ಮೊದಲನೆಯದಾಗಿ ತಮ್ಮ ಪುರುಷಾರ್ಥದ ಮಾರ್ಗ ಸ್ಪಷ್ಟವಾಗಿರುವುದು ಎಂದರೆ ಮಾರ್ಗ ಸ್ಪಷ್ಟವಾಗಿ ಕಂಡು ಬರುವುದು. ಎರಡನೆಯದಾಗಿ ತಮ್ಮ ಭವಿಷ್ಯ ಪದವಿಯೂ ಕಂಡು ಬರುವುದು. ಮೂರನೆಯದಾಗಿ ಅವರ ಸೇವೆಯನ್ನು ಮಾಡುತ್ತೀರಿ ಎಂದ ಮೇಲೆ ತಮ್ಮ ಪ್ರಕಾಶ ಶಕ್ತಿಶಾಲಿಯಾದಾಗ ಅವರಿಗೂ ಸಹಜ ಮತ್ತು ಸ್ಪಷ್ಟ ಮಾರ್ಗ ತೋರಿಸಬಲ್ಲಿರಿ. ಅವರೂ ಸಹ ಸಹಜವಾಗಿ ತಮ್ಮ ಪುರುಷಾರ್ಥದಲ್ಲಿ ಮುಂದುವರೆಯುವರು. ತಮ್ಮ ಗುರಿ ಸಹಜವಾಗಿ ಕಂಡು ಬರುವುದು, ಎಷ್ಟು ಪ್ರಕಾಶದ ಪ್ರತಿಶತ ಹೆಚ್ಚಾಗಿರುವುದೋ ಅಷ್ಟು ಎಲ್ಲಾ ಮಾತುಗಳಲ್ಲಿ ಸ್ಪಷ್ಟತೆ ಕಂಡು ಬರುವುದು. ಒಂದು ವೇಳೆ ಬೆಳಕಿನ ಪ್ರತಿಶತ ಕಡಿಮೆಯಿದ್ದರೆ ತಾವೂ ಸಹ ಪುರುಷಾರ್ಥದಲ್ಲಿ ಸ್ಪಷ್ಟವಾಗಿರುವುದಿಲ್ಲ ಮತ್ತು ಯಾರಿಗೆ ದಾರಿ ತೋರಿಸುವಿರೋ ಅವರೂ ಸಹ ಸಹಜ ಮತ್ತು ಸ್ಪಷ್ಟವಾಗಿ ತಮ್ಮನ್ನು ಮತ್ತು ಮಾರ್ಗ ಗುರಿಯನ್ನು ತಿಳಿಯಲಾರರು. ಯಾರ ಪ್ರಕಾಶ ಶಕ್ತಿಶಾಲಿಯಾಗಿದೆಯೋ ಅವರು ಗೊಂದಲದಲ್ಲಿ ಬರುವುದಿಲ್ಲ ಮತ್ತು ಬೇರೆಯವರನ್ನು ಗೊಂದಲದಲ್ಲಿ ತರುವುದಿಲ್ಲ. ಹಾಗಾದರೆ ತಮ್ಮ ಪುರುಷಾರ್ಥದಿಂದ ಯಾರ ಸೇವೆಯನ್ನು ತಾವು ಮಾಡುವಿರೋ ಅವರ ಮಾರ್ಗ ಸ್ಪಷ್ಟವಾಗಿದೆಯಾ ಎಂದು ನೋಡಬಲ್ಲಿರಾ? ಒಂದು ವೇಳೆ ಮಾರ್ಗ ಸ್ಪಷ್ಟವಾಗಿಲ್ಲದಿದ್ದರೆ ತಮ್ಮ ಪ್ರಕಾಶದ ಶೇಕಡಾದಲ್ಲಿ ಕೊರತೆಯಿದೆ. ಕೆಲವರು ತಾವೇ ಹೆಜ್ಜೆಹೆಜ್ಜೆಗೆ ಪೆಟ್ಟು ತಿನ್ನುತ್ತಿರುತ್ತಾರೆ ಮತ್ತು ಅವರ ರಚನೆಯೂ ಹಾಗೆಯೇ ಇರುತ್ತದೆ. ಈಗ ತಾವೆಲ್ಲ ಒಬ್ಬೊಬ್ಬರು ರಚಯಿತರಾಗಿದ್ದೀರಿ, ತಮ್ಮ ರಚನೆಯಿಂದ ತಮ್ಮ ಶಕ್ತಿಯನ್ನು ಗುರುತಿಸಬಹುದು. ಹೇಗೆ ಬೀಜವೋ ಹಾಗೆಯೇ ಫಲ ಬರುವುದು, ಒಂದು ವೇಳೆ ಬೀಜ ಶಕ್ತಿಶಾಲಿಯಾಗಿಲ್ಲದಿದ್ದರೆ ಕೆಲವು ವೇಳೆ ಹೂ, ಹಣ್ಣು ಬರುವವು ಆದರೆ ಸ್ವೀಕರಿಸಲು ಯೋಗ್ಯವಾಗಿರುವುದಿಲ್ಲ. ಯಾವ ಹೂಗಳು ಬಹಳ ಸುಂದರ ಮತ್ತು ಸುಗಂಧಿತವಾಗಿರುವವೋ, ಯಾವ ಹಣ್ಣು ಚೆನ್ನಾಗಿರುವುದೋ ಅವುಗಳನ್ನೇ ಖರೀದಿಸುತ್ತಾರೆ.

ಬೀಜವೇ ಶಕ್ತಿಶಾಲಿಯಿಲ್ಲದಾಗ ರಚನೆಯೂ ಸ್ವೀಕರಿಸಲು ಯೋಗ್ಯವಾಗಿರುವುದಿಲ್ಲ. ಆದ್ದರಿಂದ ತಮ್ಮ ಶೇಕಡಾ ಪ್ರಕಾಶವನ್ನು ಹೆಚ್ಚಿಸಿಕೊಳ್ಳಿ. ದಿನದಿನಕ್ಕೆ ಪ್ರೊಜೆಕ್ಟರ್ ಷೋನಂತೆ ತಮ್ಮ ಮಸ್ತಕ ಮತ್ತು ಕಣ್ಣುಗಳು ಸೇವೆ ಮಾಡಲಿ, ಯಾರೇ ಎದುರಿಗೆ ಬಂದರೂ ಆ ಚಿತ್ರವನ್ನು ತಮ್ಮ ನಯನಗಳಲ್ಲಿ ನೋಡುವರು, ಕಣ್ಣುಗಳನ್ನು ನೋಡುತ್ತಲೇ ಬುದ್ಧಿಯೋಗದಿಂದ ಅನೇಕ ಸಾಕ್ಷಾತ್ಕಾರವಾಗುವವು. ತಮ್ಮನ್ನು ಇಂತಹ ಸಾಕ್ಷಾತ್ಕಾರ ಮೂರ್ತಿಗಳನ್ನಾಗಿ ಮಾಡಿಕೊಳ್ಳಬೇಕು. ಆದರೆ ಸದಾ ಸಾಕ್ಷಿಸ್ಥಿತಿಯಲ್ಲಿ ಸ್ಥಿತರಾಗಿರುವವರು ಸಾಕ್ಷಾತ್ಕಾರ ಮೂರ್ತಿಯಾಗುವರು. ಅವರ ಕಣ್ಣುಗಳು ಪ್ರೊಜೆಕ್ಟರನ ಕೆಲಸ ಮಾಡುವವು. ಅವರ ಮಸ್ತಕ ಸದಾ ಹೊಳೆಯುತ್ತಿರುವಂತೆ ಕಾಣುವುದು. ದೇವತೆಗಳನ್ನು ಶೃಂಗರಿಸಿ ಮಸ್ತಕದಲ್ಲಿ ಬಲ್ಬ್ ಹಚ್ಚುತ್ತಾರೆ. ಇದನ್ನು ಏಕೆ ಮಾಡುತ್ತಾರೆ? ಇದು ಯಾವ ಸಮಯದ ಪ್ರಾಕ್ಟಿಕಲ್ ರೂಪವಾಗಿದೆ? (ಈ ಸಮಯದ), ನಂತರ ತಮ್ಮ ಸ್ಮೃತಿಚಿಹ್ನೆ ಮಾಡುತ್ತಾ ಬರುತ್ತಾರೆ. ಒಬ್ಬೊಬ್ಬರ ಮಸ್ತಕದಲ್ಲಿ ಪ್ರಕಾಶ ಕಂಡು ಬರಬೇಕು. ವಿನಾಶದ ಸಮಯದಲ್ಲೂ ಈ ಪ್ರಕಾಶ ರೂಪ ತಮಗೆ ಬಹಳ ಸಹಯೋಗ ಕೊಡುವುದು, ಯಾರು ಎಂತಹ ವೃತ್ತಿಯಿಂದಲೇ ಬರಲಿ ಅವರು ಈ ದೇಹವನ್ನು ನೋಡದೇ ತಮ್ಮ ಹೊಳೆಯುತ್ತಿರುವ ಈ ಬಲ್ಬನ್ನು ನೋಡುವರು. ಪ್ರಖರವಾದ ಬೆಳಕನ್ನು ನೋಡುವಾಗ ಬೇರೆ ಎಲ್ಲಾ ವಸ್ತುಗಳು ಮುಚ್ಚಿಬಿಡುತ್ತವೆ. ಅದೇ ರೀತಿ ಎಷ್ಟೆಷ್ಟು ತಮ್ಮ ಪ್ರಕಾಶ ಪ್ರಖರವಾಗುವುದೋ, ಅಷ್ಟು ಅವರಿಗೆ ದೇಹ ಕಾಣುತ್ತಿದ್ದರೂ ಕಂಡು ಬರುವುದಿಲ್ಲ. ಯಾವಾಗ ದೇಹವನ್ನು ನೋಡುವುದಿಲ್ಲವೋ ಆಗ ತಮೋಗುಣಿ ದೃಷ್ಟಿ ಮತ್ತು ವೃತ್ತಿ ಸ್ವತಃ ನಾಶವಾಗುವುದು. ಈ ಪರೀಕ್ಷೆಗಳು ಬರಲಿವೆ. ಎಲ್ಲಾ ಪ್ರಕಾರದ ಪರಿಸ್ಥಿತಿಗಳನ್ನು ಪಾಸ್ ಮಾಡಬೇಕು.

ಈ ಗುಂಪಿಗೆ ವಿನೋದದಿಂದ ಒಂದು ಹೆಸರನ್ನು ಇಡಲಾಗಿದೆ. ಇಂದು ವತನದಲ್ಲಿ ಇದೇ ಮಾತಿನ ಬಗೆಗೆ ವಾರ್ತಾಲಾಪ ನಡೆದಿತ್ತು. ಯಾರೋ ಒಬ್ಬರು ವಿನೋದಕ್ಕಾಗಿ ಹಿರಿಯ ಸಹೋದರಿಯರು ನಮ್ಮ ತಲೆ(ಹೆಡ್ಸ್), ನಾವು ಅವರ ಕಾಲುಗಳು ಎಂದು. ಆದ್ದರಿಂದ ಬಾಪ್ ದಾದಾ ಹೀಗೆ ತಿಳಿಸಿದರು. ಹಿರಿಯರು ಕೈಗಳು ಮತ್ತು ನೀವು ಹ್ಯಾಂಡಲ್ ಆಗಿದ್ದೀರಿ ಎಂದು, ಬಾಪ್ ದಾದಾ ಹೆಸರಿಟ್ಟಿದ್ದಾರೆ ಗಾಡಿಯಲ್ಲಿ ಹ್ಯಾಂಡಲ್ ಇಲ್ಲದೆಯೇ ಕೆಲಸವಾಗುವುದಿಲ್ಲ. ಹ್ಯಾಂಡಲ್ ಮುಖಾಂತರವೇ ಗಾಡಿಯನ್ನು ತಿರುಗಿಸಬಹುದು. ಹಾಗಾದರೆ ಮುಖ್ಯಸ್ಥರೂ ಆ ಹ್ಯಾಂಡಲ್ ಇಲ್ಲದೆಯೇ ಸೇವೆಯನ್ನು ಹ್ಯಾಂಡಲ್ ಮಾಡಲಾರರು. ಇದು ಹ್ಯಾಂಡಲ್ ಗುಂಪು, ಇವರನ್ನು ಬಿಟ್ಟು ಹೆಡ್ ಏನೂ ಮಾಡಲಾರರು. ಯಾರೇ ಬಂದರೂ ಅವರನ್ನು ಮೊದಲು ಹ್ಯಾಂಡಲ್ ಮಾಡುವವರು ಇವರೇ ಅಲ್ಲವೇ ತಮ್ಮ ಮೇಲೆ ಇಷ್ಟೊಂದು ಜವಾಬ್ದಾರಿಯಿದೆ. ಹ್ಯಾಂಡಲ್ ಸರಿಯಾಗಿಲ್ಲದಿದ್ದರೆ ಸೇವೆಯ ಹ್ಯಾಂಡಲಿಂಗ್ ಸರಿಯಾಗುವುದಿಲ್ಲ. ಹ್ಯಾಂಡಲ್ (handle) ಆಗಿದ್ದೀರಿ ಆದರೆ ಹೆಡ್ಸ್ (heads)ಅನ್ನು ಹ್ಯಾಂಡಲ್ ಮಾಡಬೇಡಿ, ಹೆಡ್ಸ್ ಗೆ ಹ್ಯಾಂಡ್ ಆಗಿ ಇರಿ, ಬಾಪ್ ದಾದಾರಿಗೂ ಬಲಗೈ ಆಗಿದ್ದೀರಲ್ಲವೇ, ಎಡಗೈ ಆಗುವವರೂ ಇದ್ದಾರೆ. ಬಲಗೈಗೆ ಹೆಚ್ಚು ಶಕ್ತಿ ಇದೆ, ಆದರೆ ಕೈ ಆಗಿದೆ. ಹೆಡ್ (ತಲೆ) ಅಲ್ಲ ಹ್ಯಾಂಡಲ್ ಆಗಿದ್ದೀರಲ್ಲವೇ? ಆದರೆ ಹೇಗೆ ನಿಭಾಯಿಸಬೇಕು ಮತ್ತು ಹೇಗೆ ಬಾಪ್ ದಾದಾರಿಗೆ ಬಲಗೈ ಆಗಬೇಕು ಎಂಬುದಕ್ಕಾಗಿ ಇಲ್ಲಿಗೆ ಬಂದಿರುವಿರಿ, ಈ ಗುಂಪಿನಲ್ಲಿಯ ಒಬ್ಬೊಬ್ಬರೂ ಅದ್ಭುತವನ್ನು ಮಾಡಿ ತೋರಿಸುವವರು ಆಗಿರುವಿರಿ ಸೇವೆಯನ್ನು ಸಫಲತೆಯ ರೂಪದಲ್ಲಿ ತರಬಲ್ಲಿರಿ, ಸೇವೆಯಲ್ಲಿ ಸಫಲತೆಯನ್ನು ತರಲು ಎರಡು ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಎಲ್ಲಾ ಮಾತುಗಳಲ್ಲಿ ಸಹಯೋಗಿಗಳಾಗಿರುವಿರಿ ಆದರೆ ಸೇವೆಯಲ್ಲಿ ಸಫಲತೆ ತರಲು ನಿಮಿತ್ತ ವಿಶೇಷ ಈ ಗುಂಪು ಆಗಿದೆ. ಅದಕ್ಕಾಗಿ ಗುರಿ ಮತ್ತು ನಶೆ ಈ ಎರಡು ಮಾತುಗಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಳ್ಳಿ. ಈ ಎರಡು ಮಾತುಗಳು ಈ ಗುಂಪಿನಲ್ಲಿ ವಿಶೇಷವಾಗಿ ಬರಬೇಕು. ಗುರಿ ಸರಿಯಾಗಿದ್ದಾಗ ಒಂದೇ ಪೆಟ್ಟಿಗೆ ಯಾರನ್ನಾದರೂ ಮರುಜೀವಾ ಮಾಡಬಹುದು. ಗುರಿಯಿರುವವರು ಒಂದೇ ಗುಂಡಿನಿಂದ ಸರಿಯಾಗಿ ಗುರಿಯಿಡುತ್ತಾರೆ. ಯಾರಿಗೆ ಗುರಿಯಿಡಲು ಬರುವುದಿಲ್ಲವೋ ಅವರು 3-4 ಬಾರಿ ಗುಂಡು ಹಾರಿಸಬೇಕಾಗುತ್ತದೆ. ತಮ್ಮ ಸ್ಥಿತಿಯ ಹಾಗೂ ಬೇರೆಯವರ ಸೇವೆಯ ಗುರಿ ಮತ್ತು ಸದಾ ಏಕರಸವಾಗಿರುವ ನಶೆ ಸರಿಯಾಗಿದ್ದರೆ ಸೇವೆಯಲ್ಲಿ ಸಫಲತೆ ಜಾಸ್ತಿ ಪಡೆಯಬಹುದು. ಕೆಲವೊಮ್ಮೆ ನಶೆ ಇಳಿಯುತ್ತದೆ, ಕೆಲವೊಮ್ಮೆ ಗುರಿ ತಪ್ಪುತ್ತದೆ ಎಂಬ ಎರಡೂ ಮಾತುಗಳು ಸರಿಯಾಗಿರಬೇಕು. ಯಾರಲ್ಲಿ ಎಷ್ಟು ನಶೆಯಿರುವುದೋ ಅಷ್ಟು ಗುರಿ ಸರಿಯಾಗಿರುವುದು. ಈಗ ಸೇವಾಧಾರಿಗಳಾಗಿದ್ದೀರಿ ಆದರೆ ಸೇವೆಯಲ್ಲಿ ವಿಶೇಷತೆಯನ್ನು ತರಬೇಕು? ಯಾರ ಒಂದು ಕ್ಷಣವೂ, ಸಂಕಲ್ಪವೂ ಸೇವೆಯಿಲ್ಲದೆಯೇ ಹೋಗುವುದಿಲ್ಲವೋ, ತಮ್ಮ ಸೇವೆಯಾಗಲಿ ಅಥವಾ ಅನ್ಯರ

ಸೇವೆಗಾಗಿಯಾಗಲಿ ಪ್ರತಿ ಕ್ಷಣವೂ ಸೇವೆಗಾಗಿಯೇ ಇದೆಯೋ ಅಂತಹವರನ್ನು ಸೇವಾಧಾರಿ ಎಂದು ಕರೆಯಲಾಗುತ್ತದೆ. ಆದರೆ ಸೇವಾಧಾರಿಗಳು ಎಂದಾಗ ಸಮಯ ಮತ್ತು ಸಂಕಲ್ಪ ಸೇವೆಯ ಹೊರತು ಹೋಗಬಾರದು, ಆಜ್ಞಾಕಾರಿಗಳು ಎಂಬುದರ ಅರ್ಥವೇ ಆಗಿದೆ ಆದೇಶದಂತೆ ನಡೆಯುವುದು, ನಿರಂತರ ನೆನಪು ಮುಖ್ಯ ಆದೇಶವಾಗಿದೆ. ಈ ಆದೇಶದಂತೆ ನಡೆಯದಿದ್ದರೆ ಏನೆಂದು ಹೇಳಲಾಗುತ್ತದೆ? ಎಷ್ಟೆಷ್ಟು ಈ ಆದೇಶವನ್ನು ಪ್ರಯೋಗದಲ್ಲಿ ತರುವಿರೋ ಅಷ್ಟು ಪ್ರತ್ಯಕ್ಷ ಫಲ ಸಿಗುವುದು. ಪುರುಷಾರ್ಥ ಮಾಡುತ್ತಾ ಸಂಪೂರ್ಣವಾಗುವಲ್ಲಿ ಅಡಚಣೆ ಮಾಡುವ ಯಾವ ವಿಘ್ನ ಕಂಡುಬರುತ್ತದೆ? ವಿಶೇಷ ವಿಘ್ನ ವ್ಯರ್ಥ ಸಂಕಲ್ಪದ ರೂಪದಲ್ಲಿ ಕಂಡು ಬರುತ್ತದೆ. ಹಾಗಾದರೆ ಇದರಿಂದ ಸುರಕ್ಷಿತರಾಗಿರಲು ಏನು ಮಾಡಬೇಕು? ಎಂದೂ ಒಳಗಿನ ಹಾಗೂ ಹೊರಗಿನ ವಿಶ್ರಾಂತಿಯನ್ನು ಪಡೆಯಬೇಡಿ. ವಿಶ್ರಾಂತಿಯಲ್ಲಿಲ್ಲದಿದ್ದರೆ ವ್ಯರ್ಥವಾಗಿ ಹೋಗುವುದಿಲ್ಲ. ಮತ್ತು ಸದಾ ತಮ್ಮನ್ನು ಅತಿಥಿ ಎಂದು ತಿಳಿದುಕೊಳ್ಳಿ ಅತಿಥಿ ಎಂದು ತಿಳಿದರೆ ವಿಶ್ರಾಂತಿಯನ್ನು ತೆಗೆದುಕೊಳ್ಳುವುದಿಲ್ಲ ಆಗ ಸಂಕಲ್ಪವಾಗಲಿ, ಸಮಯವಾಗಲಿ ವ್ಯರ್ಥವಾಗಿ ಹೋಗುವುದಿಲ್ಲ. ಇದಾಗಿದೆ ಸಹಜ ವಿಧಿ. ಸಮಾಪ್ತಿಯ ದಿನ ಎಲ್ಲರ ಮಸ್ತಕದಲ್ಲಿ ಬಲ್ಬ್ ಎಷ್ಟು ಶಕ್ತಿಯವು ಇವೆ ಎಂದು ನೋಡೋಣ ಮತ್ತು ಶಕ್ತಿಶಾಲಿ ಆಗಿದ್ದರೆ ಮಾಯೆ ಆ ಶಕ್ತಿಯ ಮುಂದೆ ಬರುವ ಸಾಹಸ ಮಾಡುವುದಿಲ್ಲ. ಎಷ್ಟು ಬಲ್ಬ್ ನ  ಶಕ್ತಿ ಇದೆಯೋ ಅಷ್ಟು ಎದುರಿಸಲು ಯಾರೂ ಬರುವುದಿಲ್ಲ. ಇಂತಹ ಶಕ್ತಿಶಾಲಿ ಸ್ಥಿತಿಯನ್ನು ನೋಡುತ್ತೇವೆ. ಸೇವಾಧಾರಿಗಳಾಗಿದ್ದೀರಿ, ಈಗ ಶಕ್ತಿಶಾಲಿಗಳಾಗಿ, ಚುರುಕಾಗಿದ್ದೀರಿ ಆದರೆ ಮನ - ವಚನ - ಕರ್ಮದಲ್ಲಿ ವ್ಯವಸ್ಥಿತವಾಗಿರಿ. (active-accurate).

ಅವ್ಯಕ್ತ ಮುರಳಿ 02-02-1970.

***ಆತ್ಮಿಕ ಶಕ್ತಿಯ ಗುರುತುಗಳು.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ದಿವ್ಯ ನೇತ್ರವನ್ನು ಸ್ಪಷ್ಟವಾಗಿಸಿಕೊಂಡು, ಆತ್ಮೀಯತೆಯ ನಯನಗಳಿಂದ ಬಾಪ್ ದಾದಾ ಮತ್ತು ಪೂರ್ತಿ ರಚನೆ, ಸ್ಥೂಲ, ಸೂಕ್ಷ್ಮ, ಮೂಲ ಲೋಕಗಳ ಸಾಕ್ಷಾತ್ಕಾರ ಮಾಡಿಸಿದ್ದೇನೆ.

2. ನಾನು ನನ್ನ ಪ್ರಕಾಶದ ಪ್ರತಿಶತವನ್ನು ಸಂಪೂರ್ಣವಾಗಿಟ್ಟುಕೊಂಡು ಪುರುಷಾರ್ಥದ ಮಾರ್ಗ, ಭವಿಷ್ಯದ ಪದವಿಯನ್ನು ನಾನು ನೋಡುತ್ತಾ ಇತರರಿಗೂ ಕೂಡ ಸಹಜವಾಗಿ ಮತ್ತು ಸ್ಪಷ್ಟವಾಗಿ ತೋರಿಸಿದ್ದೇನೆ.

3. ನಾನು ನನ್ನ ಗೊಂದಲವನ್ನು ಸಮಾಪ್ತಿ ಮಾಡಿಕೊಂಡು ಇತರರ ಗೊಂದಲವನ್ನು ಕೂಡ ಸಮಾಪ್ತಿ ಮಾಡುವ ಶಕ್ತಿಶಾಲಿ ಪ್ರಕಾಶಧಾರಿ.

4. ನಾನು ಬೀಜದಿಂದ  ಶಕ್ತಿಶಾಲಿ ರಚನೆಯನ್ನು ರಚಿಸಬಲ್ಲ ಮಾಸ್ಟರ್ ರಚಯಿತನು.

5. ನಾನು ಸದಾ ಸಾಕ್ಷಿ ಸ್ಥಿತಿಯಲ್ಲಿರುತ್ತಾ ನನ್ನ ಮಸ್ತಕ ಮತ್ತು ನಯನಗಳಿಂದ ಸೇವೆಯನ್ನು ಮಾಡುವ ಸಾಕ್ಷಾತ್ಕಾರ ಮೂರ್ತಿ.

6. ನನ್ನ ಎದುರಿಗೆ ಯಾರು ಬಂದರೂ ಅವರಿಗೆ ಪ್ರಕಾಶಿಸುವ ನನ್ನ ಲೈಟ್ (ಆತ್ಮ) ಅನ್ನು ನೋಡಿದಾಕ್ಷಣ ಅವರ ತಮೋಗುಣಿ ವೃತ್ತಿ, ದೃಷ್ಟಿ ಸಮಾಪ್ತಿಯಾಗಿವೆ.

7. ನಾನು ಸದಾ ನನ್ನ ಗುರಿಯನ್ನು ಸರಿಯಾಗಿಟ್ಟುಕೊಂಡು ಒಂದೇ ಸಲಕ್ಕೆ ಎಲ್ಲರನ್ನೂ ಮರುಜೀವಿಯಾಗಿ ಮಾಡಿದ್ದೇನೆ.

8. ನಾನು ಸದಾ ಏಕರಸವಾದ ನಶೆಯಿಂದ ಸೇವೆಯಲ್ಲಿ ಹೆಚ್ಚು ಸಫಲತೆಯನ್ನು ಪಡೆದಿದ್ದೇನೆ.

9. ನಾನು ಪ್ರತಿಕ್ಷಣ ಪ್ರತಿ ಸಂಕಲ್ಪದಿಂದ ಸ್ವಸೇವೆ ಮತ್ತು ಇತರರ ಸೇವೆಯನ್ನು ಮಾಡುವ ಸೇವಾಧಾರಿ.

10. ನಾನು ನಿರಂತರ ಸ್ಮೃತಿ ಎಂಬ ಮೊಟ್ಟಮೊದಲ ಮುಖ್ಯ ಆಜ್ಞೆಯ ಆಜ್ಞಾಕಾರಿ.

11. ನಾನು ಆಂತರಿಕವಾಗಿ ಮತ್ತು ಬಾಹ್ಯವಾದ ವಿಶ್ರಾಂತಿಯನ್ನು ತೆಗೆದುಕೊಳ್ಳದೆ ನನ್ನನ್ನು ನಾನು ಅತಿಥಿ ಎಂದು ಭಾವಿಸಿ, ವ್ಯರ್ಥವನ್ನು ಸಮಾಪ್ತಿ ಮಾಡಿರುವ ಸಂಪೂರ್ಣ ಸ್ವರೂಪ.

12. ನಾನು ಮನಸಾ, ವಾಚಾ, ಕರ್ಮಣಾ ಈ ಮೂರರಲ್ಲಿ ಯತಾರ್ಥತೆಯ ಮುದ್ರೆಯನ್ನು ಹಾಕಿಕೊಂಡಿದ್ದೇನೆ.